ಶನಿವಾರ 25ನೇ ಮಾರ್ಚ್ 1995ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು. ಅಧ್ಯಕ್ಷರು ಶ್ರೀ ರಮೇಶ್ ಕುಮಾರ್ ರವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ದಿನೇ ದಿನೇ ಅಹಿತಕರ ಘಟನೆಗಳು ಮುಂದುವರೆಯುತ್ತಿದ್ದು, ಈಗಾಗಲೇ ಅಲ್ಲಿ ನಾಲ್ಕು ಜನರು ಸತ್ತಿದ್ದು, ನಿನ್ನೆ ರಾತ್ರಿಯೂ ಸಹ ಇರಿತದದ ಪ್ರಕರಣಗಳಾಗಿವೆ ಆ ಮುಖ್ಯವಾದ ನಗರದಲ್ಲಿ ಸರಿಯಾದಂತಹ ಪೊಲೀಸ್ ಬಂದೋಬಸ್ತ್ ಆಗಿಲ್ಲ.

ಅಧ್ಯಕ್ಷರು : ನಾನು ಹೇಳುವುದೇನೆಂದರೆ, ಈಗ ಗಮನ ಸೆಳೆಯುವ ಸೂಚನೆ ಸಮಯವಾಗಿರುವುದರಿಂದ, ಮೊದಲು ಇದರ ಕಲಾಪ ನಡೆಸಿ ನಂತರ ಮುಂದಿನ ವಿಚಾರಗಳ ಕುರಿತು ಕೆಲವು ಸದಸ್ಯರುಗಳು ಪ್ರಸ್ತಾಪಿಸಬೇಕೆಂದಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇವತ್ತು ನಾವು ಕಲಾಪ ಮುಗಿಸಿ ಹೊರಟರೆ ನಾಳೆ ಭಾನುವಾರ ರಜಾ ದಿವಸವಾಗಿದ್ದು, ಹುಬ್ಬಳ್ಳಿಯಲ್ಲಿ ಮತ್ತೆ ಅಹಿತಕರ ಘಟನೆಗಳಾಗಬಾರದು. ಏಕೆಂದರೆ, ಗೃಹಮಂತ್ರಿಗಳು ಹುಬ್ಬಳ್ಳಿಗೆ ಪರಿಸ್ಥಿತಿ ತಿಳಿದುಕೊಳ್ಳಲು ಹೋಗಿ ಬಂದ ನಂತರ ಸದನದಲ್ಲಿ ಒಂದು ಹೇಳಿಕೆ ಮಾಡುತ್ತಾರೆಂದು ನಾವು ನಿರೀಕ್ಷಿಸಿದ್ದೇವೆ, ಅವರು ತಮ್ಮ ಹೇಳಿಕೆ ಮಾಡಬೇಕಾಗಿತ್ತು.

ಅಧ್ಯಕ್ಷರು : ಇದೇ ವಿಚಾರದಲ್ಲಿ ಸನ್ಮಾನ್ಯ ಸದಸ್ಯರುಗಳಾದ ಮಲ್ಲಿಕಾರ್ಜನ ಖರ್ಗೆ ಯವರಿಗೆ ಮತ್ತು ವಾಟಾಳ್ ನಾಗರಾಜ್ ರವರಿಗೆ ಹೇಳಿದೆ. ಈಗ ಗಮನ ಸೆಳೆಯುವ ಸೂಚನೆ ಮುಗಿದ ನಂತರ ತಾವು ತಮ್ಮ ವಿಚಾರ ಪ್ರಸ್ತಾಪಿಸಬಹುದು. ಗೃಹ ಮಂತ್ರಿಗಳು ಸದನಕ್ಕೆ ಬರಲಿ.

ಶ್ರೀ ವಾಟಾಳ್ ನಾಗರಾಜ್ : ನಾನು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿಕೊಂಡಿರುವಂತೆ ಅದೇ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇವೆ. ಈಗಾಗಲೇ ಗೃಹ ಮಂತ್ರಿಗಳು ಹುಬ್ಬಳ್ಳಿಗೆ ಹೋಗಿ ಬಂದಿದ್ದು, ಮೇಲ್ಮನೆಯಲ್ಲಿ ಈ ಕುರಿತು ಹೇಳಿಕೆ ಕೊಟ್ಟಿದ್ದು, ಈ ಸದನದಲ್ಲಿ ಇದುವರೆವಿಗೆ ಹುಬ್ಬಳ್ಳಿಯಲ್ಲಿ ಏನಾಯಿತು ಎಂಬುದರ ಬಗ್ಗೆ ಇನ್ನೂ ಹೇಳಿಕೆ ಕೊಡಲಿಲ್ಲ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಯನ್ನು ಮೊದಲು ತೆಗೆದುಕೊಳ್ಳೋಣ. ಹಿರಿಯ ಸದಸ್ಯರಾದಂಥ ಬಂಗಾರಪ್ಪನವರು ಇವೊತ್ತು ಬೆಳಿಗ್ಗೆ ನನಗೆ ದೂರವಾಣಿ ಕರೆ ಮಾಡಿ ಸದನದಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ಕೊಡಬೇಕೆಂದು ತಿಳಿಸಿರುವುದರಿಂದ ಮೊದಲು ಅವರಿಗೆ ಅವಕಾಶ ಕೊಡುತ್ತೇನೆ. ಆನಂತರ ತಾವು ಪ್ರಸ್ತಾಪಿಸಬಹುದು.